> ಶಾಲೆಯಲ್ಲಿ ಹೆಣ್ಣುಮಕ್ಕಳು ಋತುಮತಿಯರಾದಾಗ ಅವರು ಹಲವು ದಿನಗಳ ಕಾಲ ರಜೆ ಹಾಕುತ್ತಾರೆ. ಶಾಸ್ತ್ರ, ವಿಧಿ ವಿಧಾನಗಳನ್ನು ಪೂರೈಸಿದ ಬಳಿಕ ಮತ್ತೆ ಶಾಲೆಗೆ ಬರುತ್ತಾರೆ. ಈ ಶಾಲೆಯಲ್ಲಿ ಸಾಮಾನ್ಯವಾಗಿ ಬಂಜಾರಾ ಸಮುದಾಯದ ಮಕ್ಕಳೇ ಹೆಚ್ಚಾಗಿ ಬರುತ್ತಾರೆ. ಅವರ ಧಾರ್ಮಿಕ ಆಚರಣೆಗಳೇನಿದ್ದರೂ ಮನೆಗೆ ಸೀಮಿತವಾಗಿರುತ್ತದೆ. ಶಾಲೆಯಲ್ಲಿ ಅಂತಹ ಆಚರಣೆಗಳಿಗೆ ಅವಕಾಶ ಇರುವುದಿಲ್ಲ.



**-ಪರ್ವಿನ ಸುಲ್ತಾನಾ**

ಸಹ ಶಿಕ್ಷಕರು, ಸರಕಾರಿ ಪ್ರೌಢ ಶಾಲೆ ಖಣದಾಳ, ಕಲಬುರಗಿ

ಸಹಜವಾಗಿಯೇ ಆ ಬಾಲಕಿ ಪರೀಕ್ಷೆಗೆ ಅಳುಕಿನಿಂದ ಹಾಜರಾಗಿದ್ದಿರಬಹುದು. ಮನೆಯಲ್ಲಿರುವ ಆಚಾರ, ನಂಬಿಕೆಗಳು ಆಕೆಯಲ್ಲಿ ಆತ್ಮವಿಶ್ವಾಸ ತುಂಬುವ ನಿಟ್ಟಿನಲ್ಲಿ ಇರಲಿಲ್ಲ ಎನ್ನುವುದಕ್ಕೆ ಆಕೆಯ ತಂದೆಯ ಮಾತುಗಳೇ ಸಾಕ್ಷಿ. ‘ಒಂದು ವಾರದ ಹಿಂದಷ್ಟೇ ನನ್ನ ಮಗಳು ಋತುಮತಿಯಾಗಿದ್ದಳು. ಆದರೆ ಶಾಲೆಯಲ್ಲಿ ನಿಗದಿಯಾಗಿದ್ದ ಪರೀಕ್ಷೆ ಬರೆಯಲು ಮಗಳು ಹೋಗುತ್ತೇನೆ ಎಂದಾಗ, ಅವಳನ್ನು ತರಗತಿಯಿಂದ ಪ್ರತ್ಯೇಕವಾಗಿ ಕುಳ್ಳಿರಿಸಲು ಅನುಕೂಲ ಕಲ್ಪಿಸುವಂತೆ ನಾನು ಶಾಲೆಯ ಆಡಳಿತ ಮಂಡಳಿಗೆ ಕೇಳಿಕೊಂಡಿದ್ದೆ. ಆದರೆ ಆಡಳಿತ ಮಂಡಳಿ ಯಾವುದೇ ವ್ಯವಸ್ಥೆ ಮಾಡದೇ ಮಗಳನ್ನು ತರಗತಿಯ ಹೊರಗೆ ಮೆಟ್ಟಿಲಿನ ಮೇಲೆ ಕುಳಿತು ಪರೀಕ್ಷೆ ಬರೆಯಲು ಸೂಚಿಸಿದೆ’ ಎಂದು ತಂದೆ ಮಾಧ್ಯಮದ ಮುಂದೆ ಹೇಳಿಕೊಂಡಿದ್ದಾರೆ. ಅಂದರೆ ಒಂದು ವಾರ ಕಳೆದರೂ ಮುಟ್ಟಿನ ಅಸ್ಪೃಶ್ಯತೆಯ ಆಚರಣೆ ಮುಗಿಯುವುದಿಲ್ಲವೇ ಎನ್ನುವ ಮತ್ತೊಂದು ಪ್ರಶ್ನೆಯೂ ಇಲ್ಲಿ ಗೋಚರಿಸುತ್ತದೆ.

ಮುಟ್ಟಾದ ಬಾಲಕಿಯನ್ನು ಅಸ್ಪೃಶ್ಯಳಂತೆ ನೋಡಿರುವ ಘಟನೆ ಕೊಯಮತ್ತೂರಿಗೆ ಸೀಮಿತವಲ್ಲ. ನಮ್ಮ ರಾಜ್ಯದಲ್ಲೂ ಪರಿಸ್ಥಿತಿ ಭಿನ್ನವೇನೂ ಅಲ್ಲ. ಕೆದಕುತ್ತಾ ಹೋದರೆ ಹೆಣ್ಣುಮಕ್ಕಳ ಪರಿಸ್ಥಿತಿ ಎಲ್ಲ ಕಡೆಯೂ ಹೆಚ್ಚೂಕಡಿಮೆ ಒಂದೇ ರೀತಿ ಇದೆ.

## ಬಾಲ್ಯವಿವಾಹವೆಂಬ ಉರುಳು

ಒಂದಲ್ಲ ಒಂದು ರೀತಿಯ ಧಾರ್ಮಿಕ ನಂಬಿಕೆಯನ್ನು ಆಸರೆಯಾಗಿ ಮಾಡಿಕೊಂಡಿರುವ ಕುಟುಂಬಗಳು ಋತುಮತಿಯರಾದ ವಿದ್ಯಾರ್ಥಿನಿಯರನ್ನು ಶಾಲೆಗೆ ಕಳುಹಿಸದೇ ಇರುವ ಪರಿಪಾಟ ಈಗಲೂ ಬಹುತೇಕ ಚಾಲ್ತಿಯಲ್ಲಿರುವುದು ನಮ್ಮ ರಾಜ್ಯದ ಹೈದರಾಬಾದ್ ಕರ್ನಾಟಕದ ಕೆಲವು ಹಳ್ಳಿಗಳಲ್ಲಿ. ಬಡವರ್ಗದ ಕುಟುಂಬಗಳಲ್ಲಿ ಮನೆಯ ಹುಡುಗಿಯು ದೊಡ್ಡವಳಾದ ತಕ್ಷಣ ಆಕೆಗೆ ಮದುವೆ ಮಾಡಿಬಿಡಬೇಕು ಎನ್ನುವ ಧಾವಂತ ಪೋಷಕರಲ್ಲಿ ಇರುತ್ತದೆ. ದೊಡ್ಡವಳಾದ ನಂತರ ಶಾಲೆಗೆ ಬರದೇ ಇರುವ ಹುಡುಗಿಯ ಮನೆಯನ್ನು ಹುಡುಕಿಕೊಂಡು ಹೋಗುವ ಶಿಕ್ಷಕಿಯರನ್ನೇ ಬೈದು ಕಳುಹಿಸುವ ಉದಾಹರಣೆಗಳೂ ಇವೆ. ವಿದ್ಯಾರ್ಥಿನಿಗೆ ಮದುವೆ ಮಾಡುವ ಪ್ರಯತ್ನಗಳು ನಡೆಯುತ್ತಿರುವಾಗ ಅದನ್ನು ನಿಲ್ಲಿಸುವ ಪ್ರಯತ್ನ ಮಾಡುವವರನ್ನು ವಿರೋಧಿಗಳಂತೆ ನೋಡಲಾಗುತ್ತದೆ.



ಶಿರಾದಲ್ಲಿ ‘ಮುಟ್ಟಿನ ಮಣಿಕಟ್ಟ’ನ್ನು ಪ್ರದರ್ಶಿಸುತ್ತಿರುವ ಹೆಣ್ಣುಮಕ್ಕಳು